**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ.,ಯವರ ನ್ಯಾಯಾಲಯ**
**ಟಿ.ನರಸೀಪುರ**

**ಸಿಸಿ ನಂಃ 684/2023**

**ಸಿಡಬ್ಲ್ಯೂ-5 ಪಿಡಬ್ಲ್ಯೂ- 3**

| | | |
|---|---|---|
| ಸಾಕ್ಷಿದಾರರ ಹೆಸರು | : | ಮಹಮ್ಮದ್ ಇರ್ಫಾನ್ |
| ತಂದೆಯ ಹೆಸರು | : | ಮಹಮ್ಮ ದ್ ರಫೀ ಉಲ್ಲಾ |
| ವಯಸ್ಸು | : | 29 ವರ್ಷ |
| ಉದ್ಯೋಗ | : | ಖಾಸಗಿ ಕೆಲಸ |
| ವಾಸಸ್ಥಳ | : | ಮೈಸೂರು |

**ಸಾಕ್ಷಿಗೆ ದಿನಾಂಕಃ 18.06.2026 ರಂದು ಪ್ರಮಾಣ ಮಾಡಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದಃ**

ಚಾಸಾ.2,3 ಮತ್ತು 4 ರವರು ನನಗೆ ಪರಿಚಯ ಇರುವುದಿಲ್ಲ. ಆರೋಪಿಗಳು ನನಗೆ ಗೊತ್ತಿರುವುದಿಲ್ಲ. ಈ ಪ್ರಕರಣದ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಮೃತ ಮಹದೇವಮ್ಮ ನನಗೆ ಪರಿಚಯ ಇರುವುದಿಲ್ಲ. ನಾನು ಅಪಘಾತವನ್ನು ಕಣ್ಣಾರೆ ನೊಡಿರುವುದಿಲ್ಲ. ಪೋಲಿಸರ ಮುಂದೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ.

ಸಾಕ್ಷಿಯು ಅಮಾನತ್ತು ಮಹಜರ್ ನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿ.ಪಿ.8(ಬಿ) ಎಂದು ಗುರುತಿಸಲಾಯಿತು. ಪೋಲಿಸರು ಯಾವುದೇ ವಾಹನವನ್ನು ಅಮಾನತ್ತುಪಡಿಸಿಕೊಂಡಿರುವುದಿಲ್ಲ. ನಿ.ಪಿ.8 ಕ್ಕೆ ಪೋಲಿಸರ ಕೋರಿಕೆಯ ಮೇರೆಗೆ ಸಹಿ ಮಾಡಿರುತ್ತೇನೆ. ಫೋಟೊಗಳನ್ನು ನೋಡಿ ಗುರುತಿಸಿರುವುದಿಲ್ಲ.

**(ಮಾನ್ಯ ಎಪಿಪಿ ರವರ ಕೋರಿಕೆ ಮೇರೆಗೆ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು)**

**ಪಾಟೀ ಸವಾಲುಃ ಮಾನ್ಯ ಎಪಿಪಿ ರವರಿಂದಃ**

ದಿ.13.07.2023 ರಂದು ಬೆಳಿಗ್ಗೆ 10.30 ಗಂಟೆ ಸಮಯದಲ್ಲಿ ನಾನು ಮತ್ತು 1 ನೇ ಆರೋಪಿ, ಚಾಸಾ.4 ರವರು ಆರೋಪಿತರಿಗೆ ಸೇರಿದ ವಾಹನದ ಸಂ. ಕೆ.ಎ 55 ಬಿ. 6100 ಹೋಂಡಾ ಆಕ್ಟಿವ್ ಸ್ಕೂಟರ್ ನಲ್ಲಿ ಬೆಳಿಗ್ಗೆ 8.30 ಕ್ಕೆ ಮೈಸೂರಿನಿಂದ ಹೊರಟು ನಂತರ 11.30 ಗಂಟೆಗೆ

ಶಿವನಸಮುದ್ರಕ್ಕೆ ಹೋಗಿ ಅಲ್ಲಿ ವೈಂಡಿಂಗ್ ಕೆಲಸವನ್ನು ಮುಗಿಸಿ ನಂತರ ನಾನು ಮತ್ತು 1 ನೇ ಆರೋಪಿ, ಚಾಸಾ.4 ರವರು ಕೆಲಸವನ್ನು ಮುಗಿಸಿ ಸಂಜೆ 6.30 ಗಂಟೆಗೆ ಹೊರಟು ಕೊಳ್ಳೇಗಾಲ ಮುಳ್ಳೂರು ಮಾರ್ಗವಾಗಿ ರಾತ್ರಿ 7.30 ರ ಸಮಯದಲ್ಲಿ ತಡಿಮಾಲಂಗಿ ಗ್ರಾಮದ ವಸಂತ ರವರ ಚಿಕನ್ ಕಬಾಬ್ ಅಂಗಡಿ ಮುಂಭಾಗ ಹಾದುಹೋಗುವ ಕೊಳ್ಳೇಗಾಲ ಮಾದಾಪುರ ಮುಖ್ಯ ರಸ್ತೆಯಲ್ಲಿ 1 ನೇ ಆರೋಪಿಯು ತನ್ನ ಸ್ಕೂಟರ್ ನ್ನು ಅತಿವೇಗ ಮತ್ತು ಅಜಾಗರೂಕತೆಯಿಂದ ಓಡಿಸಿಕೊಂಡು ಅದೇ ವೇಳೆಯಲ್ಲಿ ರಸ್ತೆಯನ್ನು ದಾಟುತ್ತಿದ್ದ ಮೃತ ಮಹದೇವಮ್ಮ ರವರಿಗೆ ಹಿಂಬದಿಯಿಂದ ಡಿಕ್ಕಿ ಪಡಿಸಿದ ಪರಿಣಾಮ ಅವರು ರಸ್ತೆಯ ಮೇಲೆ ಬಿದ್ದು, ತಲೆ ಮತ್ತು ಇನ್ನಿತರ ಭಾಗಗಳಲ್ಲಿ ಗಾಯವಾಗಿದ್ದು, ಪ್ರಜ್ಞೆ ತಪ್ಪಿದ್ದು, ಸ್ಥಳದಲ್ಲೇ ಇದ್ದ ಚಾಸಾ.2 ಮತ್ತು 3 ರವರು ಮೃತ ಮಹದೇವಮ್ಮ ನವರನ್ನು ಎತ್ತಿ ನೋಡಲಾಗಿ ಮೃತ ಮಹದೇವಮ್ಮರವರಿಗೆ ಪ್ರಜ್ಞೆ ತಪ್ಪಿಹೋಗಿರುತ್ತದೆ. ನಂತರ ನಾನು ಮತ್ತು 1 ನೇ ಆರೋಪಿ ಮತ್ತು ಚಾಸಾ.5 ರವರು ಸ್ಥಳದಿಂದ ಹೊರಟು ಹೋಗಿರುತ್ತೇವೆ ಎಂದರೆ ಸರಿಯಲ್ಲ.

ಚಾಸಾ.2 ಮತ್ತು 3 ರವರು ಮೃತ ಮಹದೇವಮ್ಮರವರ ಮೈಸೂರಿನ ಬೃಂದಾವನ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ ಎಂದರೆ ಸರಿಯಲ್ಲ. ನಂತರ ದಿ.20.07.2023 ರಂದು ರಾತ್ರಿ 9.30 ರ ಸಮಯದಲ್ಲಿ ಅವರು ತೀರಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ದಿ.31.07.2023 ರಂದು ಚಾಸಾ.16 ರವರು ನನ್ನನ್ನು ಮತ್ತು 1 ನೇ ಆರೋಪಿ, ಚಾಸಾ.4 ರವರನ್ನು ಠಾಣೆಗೆ ಬರಮಾಡಿಕೊಂಡು ಅಪಘಾತ ಪಡಿಸಿದ ವಾಹನವಾದ ಕೆ.ಎ.55 ವಿ 6100 ಹೋಂಡಾ ಆಕ್ಟಿವ್ ವಾಹನವನ್ನು ನನ್ನ ಹಾಗೂ ಪಂಚರ ಸಮಕ್ಷಮ ಅಮಾನತ್ತುಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಂತರ ಅದೇ ದಿನ ಚಾಸಾ.18 ರವರು ನನ್ನ ಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಅಲ್ಲಗಳೆದ ಹೇಳಿಕೆಯನ್ನು ನಿ.ಪಿ.10 ಎಂದು ಗುರುತಿಸಲಾಯಿತು. ಸಾಕ್ಷಿಗೆ ನಿ.ಪಿ.10 ನ್ನು ಓದಿ ಹೇಳಲಾಗಿ ಅದನ್ನು ನಿರಾಕರಿಸಿರುತ್ತಾರೆ. ನಾನು ಮತ್ತು 1 ನೇ ಆರೋಪಿ ಸ್ನೇಹಿತರು ಎಂದರೆ ಸರಿ. ಆದಕಾರಣ ನಿ.ಪಿ.8 ಮತ್ತು 10 ರ ವಿಚಾರ ನನಗೆ ಗೊತ್ತಿದ್ದರೂ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರುವಿಚಾರಣೆ ಇರುವುದಿಲ್ಲ.**

**(ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಒ.**

**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**

**ಮತ್ತು ಪ್ರ.ದ.ನ್ಯಾದಂ. ಟಿ.ನರಸೀಪುರ**